ದಿನಾಂಕ 18.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ.ಟಿ.ಜಿ., ವಕೀಲರಿಂದಃ**

4. ಹೊನ್ನಾಪುರದಲ್ಲಿ ನಾವು ಇತ್ತೀಚೆಗೆ ಬಂದು ನೆಲೆಸಿರುವುದು ಎಂದರೆ ಸರಿಯಲ್ಲ. ನನ್ನ ತಂದೆ ಬೇರೆ ಊರಿನವರು, ಹೊನ್ನಪುರದವರಲ್ಲ. ನಾವು ಸರ್ವೇ ನಂ.7 ರ ಸರ್ಕಾರಿ ಜಾಗದಲ್ಲಿ ವಾಸವಿದ್ದೇವೆ ಎಂದರೆ ಸರಿ. ಸರ್ಕಾರದಿಂದ ಆ ಜಾಗಕ್ಕೆ ಯಾವುದೇ ಮಂಜೂರಾತಿ ನಿಮಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಸರ್ವೇ ಸ್ಕೆಚ್ ಮಾಡಿಕೊಟ್ಟಿದ್ದಾರೆ, ಸಾಗುವಳಿ ಚೀಟಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ.7 ಒಟ್ಟು 6 ಎಕರೆ ಗೋಮಾಳ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂ.7 ರಲ್ಲಿ ಎರಡು ಎಕರೆ ಜಮೀನಿನು ಸ್ಮಶಾನಕ್ಕಾಗಿ ಮೀಸಲಿಡಲಾಗಿದೆ ಎಂದರೆ ಸರಿ. ನಾವು ಅಲ್ಲಿ ಸ್ಮಶಾನದಲ್ಲಿ ಹೂಳಕ್ಕೂ ಬಿಡದೇ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

5. ಸರ್ವೇ ನಂ.7 ಕ್ಕೆ ಹೊಂದಿಕೊಂಡಂತೆ ಇರುವಂತಹ ಜಮೀನು ಆರೋಪಿಗೆ ಸೇರಿದ್ದು ಎಂದರೆ ಸರಿ. ಆರೋಪಿ ತನ್ನ ಜಮೀನಿಗೆ ಹೋಗಬೇಕಾದರೆ ಹಾಗು ಅಲ್ಲಿನ ಅಕ್ಕಪಕ್ಕದ ಇನ್ನುಳಿಕೆ ಜಮೀನಿನವರು ತಮ್ಮ ಜಮೀನುಗಳಿಗೆ ಹೋಗಲು ಸರ್ವೇ ನಂ.7 ರಲ್ಲಿರುವಂತಹ ಗೋಮಾಳ ಜಾಗದಿಂದಲೇ ಹೋಗಬೇಕು ಎಂದರೆ ಸರಿಯಲ್ಲ. ಹೊನ್ನಾಪುರ ಗ್ರಾಮದ ಸರ್ವೇ ನಂ.7 ರ ಪಹಣಿ ನಿಶಾನೆ ಡಿ 1 ಸಾಕ್ಷಿಗೆ ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯಲ್ಲಿ ಸರ್ಕಾರಿ ಗೋಮಾಳ ಜಮೀನು 4 ಎಕರೆ 4 ಗುಂಟೆ ಈಶ್ವರ ಪ್ರಸಾದ್ ಬಿನ್ ಲೇಟ್ ಸಿದ್ದಪ್ಪ ಅವರ ಜಮೀನು 22 ಗುಂಟೆ ಸಮಾಜ ಕಲ್ಯಾಣ ಇಲಾಖೆಯ ಜಮೀನು 0.07.08 ಗುಂಟೆ, ಸಾರ್ವಜನಿಕ ಸ್ಮಶಾನ 1 ಎಕರೆ 10 ಗುಂಟೆ ಇದ್ದು, ಈ ಜಮೀನಿನಲ್ಲಿ ನಿಮ್ಮಗಳ ಹೆಸರು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ.

6. ನಾನು ಮತ್ತು ನನ್ನ ಮನೆಯ ಸದಸ್ಯರು ನಿಶಾನೆ ಡಿ 1 ರ ಜಮೀನಿಗೆ ಯಾರೇ ಬಂದರೂ ಸಹ ತಕರಾರು ಮಾಡಿ ಸ್ಮಶಾನದಲ್ಲಿ ಹೂಳಲೂ ಬಿಡದೇ ನನ್ನ ಸಹೋದರಿಯರನ್ನು ಮುಂದೆ ಬಿಟ್ಟು ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯಿದೆಯನ್ವಯ ದೂರುಗಳನ್ನು ಸಲ್ಲಿಸುತ್ತಿರುತ್ತೇವೆ ಎಂದರೆ ಸರಿಯಲ್ಲ.

7. ದಿನಾಂಕ 28.06.2017 ರಂದು ಆರೋಪಿ ತಹಶೀಲ್ದಾರ್ ರವರಿಗೆ ದೂರು ನೀಡಿದ್ದು, ಅದೇ ರೀತಿ ಗುರುಮೂರ್ತಿಯವರು ಸಹ ತಹಶೀಲ್ದಾರ್ ರವರಿಗೆ ದೂರು ನೀಡಿದ್ದು, ತಮ್ಮ ಜಮೀನುಗಳಿಗೆ ಹೋಗಲು ನಾವುಗಳು ತಕರಾರು ಮಾಡುತ್ತಿದ್ದೇವೆ ಎಂದು ನಿವೇದಿಸಿಕೊಂಡಿದ್ದು, ತಹಶೀಲ್ದಾರ್ ರವರು ತಕರಾರು ಬಗೆಹರಿಸಲು ಸ್ಥಳಕ್ಕೆ ಬಂದಾಗ ನಾವುಗಳು ಅವರಿಗೂ ಸಹ ಅಡ್ಡಿಪಡಿಸಿ, ತಹಶೀಲ್ದಾರ್ ರವರನ್ನು ಸಹ ಅಲ್ಲಿಗೆ ಬರಲು ಬಿಡುತ್ತಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ದಿನಾಂಕ 31.07.2023 ರಂದು ಸಹ ಆರೋಪಿ ಮಾಗಡಿ ತಹಶೀಲ್ದಾರ್ ರವರಿಗೆ ತನ್ನ ಜಮೀನಿಗೆ ಹೋಗಲು ನಾವುಗಳು ಅಡ್ಡಿ ಪಡಿಸುತ್ತಿರುವ ವಿಚಾವಾಗಿ ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 30.07.2023 ರಂದು ಗಲಾಟೆಯಾಗಿದ್ದು, ಆರೋಪಿ ತಹಶೀಲ್ದಾರ್ ರವರಿಗೆ ದೂರು ಕೊಟ್ಟ ವಿಚಾರ ನನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ.

8. ಆರೋಪಿ ಕೊಟ್ಟಂತಹ ದೂರಿನನ್ವಯ ದಿನಾಂಕ 09.01.2024 ರಂದು ಕುದೂರು ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಸಂಜೆ 6 ಗಂಟೆಗೆ ಠಾಣೆಗೆ ಕರೆದಿದ್ದರು, ನಾವೆಲ್ಲಾ ಹೋಗಿದ್ದೆವು, ಸ್ಥಳ ಪರಿಶೀಲನೆಗೆ ಬರುತ್ತೇವೆ ಎಂದು ಹೇಳಿದ್ದರು. ಮಾರನೇ ದಿನ ಯಾರು ಬಂದಿಲ್ಲ, ಮತ್ತೆ ಮುಂದೆ ಏನು ಆಗಲಿಲ್ಲ ಎಂದು ಉತ್ತರಿಸಿರುತ್ತಾರೆ. ನಿಶಾನೆ ಸಿ 1 ದೂರನ್ನು ಜಗದೀಶ್ ಎಂಬುವವರು ನನ್ನ ಮತ್ತು ನನ್ನ ಸಹೋದರಿಯರು ಮತ್ತು ಸಹೋದರನ ವಿರುದ್ಧ ಗುನ್ನೆ ಸಂಖ್ಯೆ 242/2023 ರಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೇ ನಂ.7 ರ ಅಕ್ಕಪಕ್ಕದ ಜಮೀನುದಾರರಿಗೆ ನಾವು ಸರ್ವೇ

ನಂ.7 ರ ಮೂಲಕ ಓಡಾಡಲು ಬಿಡದೇ ತಕರಾರು ಮಾಡುತ್ತಿರುವ ಕಾರಣ ಅವರುಗಳೆಲ್ಲಾ ನಮ್ಮ ವಿರುದ್ಧ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

9. ಆರೋಪಿಯ ಮನೆ ಹೊನ್ನಪುರ ಊರಿನಲ್ಲಿ ಇದೆ ಎಂದರೆ ಸರಿ. ನಮ್ಮ ಮನೆ ಸರ್ವೇ ನಂ.7 ರ ಆಚೆ ಊರಿನಿಂದ ಹೊರಗೆ ಇದೆ ಎಂದರೆ ಸಾಕ್ಷಿ ಸರ್ವೇ ನಂ.7 ಕ್ಕೆ ಹೊಂದಿಕೊಂಡಂತೆ ಊರಿನ ಒಳಗೆ ಇದೆ ಎಂದು ಉತ್ತರಿಸಿರುತ್ತಾರೆ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿಕೊಂಡಂತೆ ಆರೋಪಿ ಯಾವುದೇ ಕೃತ್ಯ ಎಸಗಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ, ಬಟ್ಟೆ ಹಿಡಿದು ಎಳೆದಾಡಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರರು ಆರೋಪಿ ತನ್ನ ಮನೆಯಲ್ಲಿ ಇದ್ದಾಗ ಆತನನ್ನು ಹಿಡಿದುಕೊಂಡು ಬಂದು ಎಳೆದಾಡಿ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಹಲ್ಲೆಗೆ ಒಳಗಾಗಿದ್ದ ಕಾರಣ ಆತ ದೂರು ಕೊಡಬಹುದು ಎಂಬ ಕಾರಣದಿಂದ ನಾನು ಮತ್ತು ನನ್ನ ಮನೆಯ ಸದಸ್ಯರು ವಿದ್ಯಾವಂತರಾಗಿರುವ ಕಾರಣ ಕಾನೂನಿನ ಬಗ್ಗೆ ತಿಳುವಳಿಕೆ ಇದ್ದು, ನಮ್ಮನ್ನು ಪ್ರತಿರಕ್ಷೆ ಮಾಡಿಕೊಳ್ಳುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ಆರೋಪಿ ಮೊದಲು ದೂರು ಕೊಡಲು ಹೋಗಿದ್ದರು, ಆದರೆ ಪೋಲಿಸರು ಎಲ್ಲಾ ವಿಚಾರವನ್ನು ನೋಡಿ ನಮ್ಮ ದೂರನ್ನು ಸ್ವೀಕರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾವು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸದೃಢರಿರುವ ಕಾರಣ ನಮ್ಮ ಪ್ರಭಾವ ಒಡ್ಡಿ ಸುಳ್ಳು ದೂರು ದಾಖಲಾಗುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**